ಸಾರ್ವಜನಿಕ ಗ್ರಂಥಾಲಯ ಇಲಾಖೆ 0816-2278063
Email - tumdcllib@yahoo.co.in

ಸಂ: ಜಿಕೇಗ್ರಂತು/ಗ್ರಾ.ಪಂ.ಗ್ರಂ/ಎ2/ಮೇ.ನೇ/06/1113/2021-22

ಉಪ ನಿರ್ದೇಶಕರವರ ಕಛೇರಿ,
ಜಿಲ್ಲಾ ಕೇಂದ್ರ ಗ್ರಂಥಾಲಯ,
ಟೌನ್‌ಹಾಲ್ ವೃತ್ತ, ಬಿ.ಹೆಚ್.ರಸ್ತೆ,
ತುಮಕೂರು - 572 101
ದಿನಾಂಕ:16-02-2022

## ಪತ್ರಿಕಾ ಪ್ರಕಟಣೆ

ವಿಷಯ: ತುಮಕೂರು ಜಿಲ್ಲಾ ಕೇಂದ್ರ ಗ್ರಂಥಾಲಯ ವ್ಯಾಪ್ತಿಯಲ್ಲಿ ಬರುವ ಗ್ರಾಮ ಪಂಚಾಯಿತಿ ಗ್ರಂಥಾಲಯಗಳಿಗೆ ಗೌರವ ಸಂಭಾವನೆ ಆಧಾರದ ಮೇಲೆ ಮೇಲ್ವಿಚಾರಕರನ್ನು ಆಯ್ಕೆಮಾಡುವ ಬಗ್ಗೆ.

ಉಲ್ಲೇಖ: ಸರ್ಕಾರದ ಆದೇಶ ಸಂ: ಇಡಿ 117/ಯೋಯೋಕಾ/2006, ದಿನಾಂಕ:24-06-2006.

****

ಮೇಲಿನ ಉಲ್ಲೇಖಿತ ಸರ್ಕಾರದ ಆದೇಶದನ್ವಯ 2021-22ನೇ ಸಾಲಿಗೆ ತುಮಕೂರು ಜಿಲ್ಲಾ ಕೇಂದ್ರ ಗ್ರಂಥಾಲಯ ವ್ಯಾಪ್ತಿಯಲ್ಲಿ ಬರುವ ಗ್ರಾಮ ಪಂಚಾಯಿತಿ ಗ್ರಂಥಾಲಯಗಳಲ್ಲಿ ಖಾಲಿ ಇರುವ 19 ಗ್ರಂಥಾಲಯ ಮೇಲ್ವಿಚಾರಕರ ಸ್ಥಾನಗಳಿಗೆ ಮಾಸಿಕ ರೂ.12,000/- ಗೌರವ ಸಂಭಾವನೆ ಆಧಾರದ ಮೇಲೆ ಆಯ್ಕೆಮಾಡಲು ನಿಯಮ ಮತ್ತು ಷರತ್ತುಗಳಿಗೆ ಒಳಪಟ್ಟು ಆಯಾ ಗ್ರಾಮ ಪಂಚಾಯಿತಿ ಗ್ರಂಥಾಲಯಗಳಿಗೆ ನಿಗದಿಪಡಿಸಿದ ಮೀಸಲಾತಿಗೆ ಅನುಗುಣವಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳು ಆಯಾ ಗ್ರಾಮ ಪಂಚಾಯಿತಿ ಕಾರ್ಯಾಲಯಗಳಿಗೆ ದಿನಾಂಕ:14-03-2022 ರ ಸಂಜೆ 5.00 ಗಂಟೆ ಒಳಗಾಗಿ ಅರ್ಜಿಗಳನ್ನು ಸಲ್ಲಿಸುವುದು. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:14-03-2022.

| ಕ್ರ.ಸಂ | ಗ್ರಾಮ ಪಂಚಾಯಿತಿ ಹೆಸರು | ತಾಲ್ಲೂಕು | ಮೀಸಲಾತಿ ವಿವರಗಳು | |
|---|---|---|---|---|
| 1 | ಅಂಕಸಂದ್ರ | ಗುಬ್ಬಿ | ಸಾ.ಅ. | ಸಾ.ಅ. |
| 2 | ಬಾಗೇನಹಳ್ಳಿ | ಕುಣಿಗಲ್ | ಪ್ರವರ್ಗ-1 | ಅಂ.ವಿ. |
| 3 | ಬೇವಿನಹಳ್ಳಿ | ಶಿರಾ | ಪ.ಜಾ. | ಗ್ರಾ.ಅ. |
| 4 | ಭೈರನಾಯಕನಹಳ್ಳಿ | ತಿಪಟೂರು | ಸಾ.ಅ. | ಸಾ.ಅ. |
| 5 | ಚೆನ್ನಕೇಶವಪುರ | ಪಾವಗಡ | III B | ಅಂ.ವಿ. |
| 6 | ದಂಡಿನಶಿವರ | ತುರುವೇಕೆರೆ | ಸಾ.ಅ. | ಸಾ.ಅ. |
| 7 | ಗರಣಿ | ಮಧುಗಿರಿ | ಪ.ಜಾ. | ಗ್ರಾ.ಅ. |
| 8 | ಹುಳಿಯಾರು | ಚಿ.ನಾ.ಹಳ್ಳಿ | ಸಾ.ಅ. | ಮ.ಅ. |
| 9 | ಕೆಂಕೆರೆ | ಚಿ.ನಾ.ಹಳ್ಳಿ | III A | ಸಾ.ಅ. |
| 10 | ಕೊಡಗೆಹಳ್ಳಿ | ಕುಣಿಗಲ್ | ಸಾ.ಅ. | ಗ್ರಾ.ಅ. |
| 11 | ಮುದ್ದೇನಹಳ್ಳಿ (ಮಾಳಿಗೆಹಳ್ಳಿ) | ಚಿ.ನಾ.ಹಳ್ಳಿ | III B | ಸಾ.ಅ. |
| 12 | ನಡೆಮಾವಿನಪುರ | ಕುಣಿಗಲ್ | ಸಾ.ಅ. | ಮಾ.ಸೈ. |
| 13 | ನಾದೂರು | ಶಿರಾ | II A | ಗ್ರಾ.ಅ. |
| 14 | ನಲ್ಲಿಗಾನಹಳ್ಳಿ | ಪಾವಗಡ | ಸಾ.ಅ. | ಸಾ.ಅ. |
| 15 | ನಿಡವಳಲು | ತುಮಕೂರು | ಪ.ಜಾ. | ಅಂ.ವಿ. |
| 16 | ನೊಣವಿನಕೆರೆ | ತಿಪಟೂರು | ಸಾ.ಅ. | ಮ.ಅ. |
| 17 | ಸಿದ್ದಾಪುರ | ಪಾವಗಡ | II A | ಅಂ.ವಿ. |
| 18 | ವಳ್ಳೂರು | ಪಾವಗಡ | ಸಾ.ಅ. | ಗ್ರಾ.ಅ. |
| 19 | ವಡ್ಡಗೆರೆ | ಕೊರಟಗೆರೆ | ಪ.ಜಾ. | ಮ.ಅ. |

. . . 2)

ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
ಜಿಲ್ಲಾ ಪಂಚಾಯತ್, ತುಮಕೂರು.

**ಷರತ್ತುಗಳು:**

## ಅಭ್ಯರ್ಥಿ ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲಾತಿಗಳು:

1. ಅಭ್ಯರ್ಥಿಯು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಂಕಪಟ್ಟಿ.
2. ಅಭ್ಯರ್ಥಿಯು ಆಯಾ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ವಾಸಿಸುತ್ತಿರಬೇಕು ಮತ್ತು ತಾಲ್ಲೂಕು ತಹಶೀಲ್ದಾರ್ ರವರಿಂದ ಪಡೆದ ದೃಢೀಕೃತ ವಾಸಸ್ಥಳ ಪ್ರಮಾಣ ಪತ್ರವನ್ನು ಸಲ್ಲಿಸುವುದು.
3. ಚುನಾವಣಾ ಗುರುತಿನ ಚೀಟಿ.
4. ಜಾತಿ ಪ್ರಮಾಣ ಪತ್ರವನ್ನು ತಾಲ್ಲೂಕು ತಹಶೀಲ್ದಾರ್ ರವರಿಂದ ಪಡೆದು ಸಲ್ಲಿಸತಕ್ಕದ್ದು. (ನಿಗದಿಪಡಿಸಲಾದ ಮೀಸಲಾತಿಗೆ ಒಳಪಡುವ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸತಕ್ಕದ್ದು).
5. ಯಾವುದೇ ಮೀಸಲಾತಿಯನ್ನು/ಸಡಿಲಿಕೆಯನ್ನು ಒಳಪಡುವ ಅಭ್ಯರ್ಥಿಗಳು ಸಂಬಂಧಿಸಿದ ಇಲಾಖೆಯಿಂದ ದೃಢೀಕೃತ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.
6. ಕನ್ನಡ ಮಾಧ್ಯಮ ಅಭ್ಯರ್ಥಿ ಮೀಸಲಾತಿ ಪ್ರಮಾಣ ಪತ್ರಗಳನ್ನು ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಪಡೆದು ಸಲ್ಲಿಸತಕ್ಕದ್ದು.
7. ಗ್ರಂಥಾಲಯ ವಿಜ್ಞಾನದಲ್ಲಿ ತರಬೇತಿ ಪಡೆದವರಿಗೆ ಆದ್ಯತೆ ನೀಡಲಾಗುವುದು.
8. ವಯಸ್ಕರ ಶಿಕ್ಷಣದಡಿ ನಡೆಯುತ್ತಿರುವ ಮುಂದುವರಿಕಾ ಕಲಿಕಾ ಕೇಂದ್ರಗಳ ಪ್ರೇರಕ/ಉಪಪ್ರೇರಕರುಗಳಿಗೆ ಆದ್ಯತೆ ನೀಡಲಾಗುವುದು.
9. ಪ್ರೇರಕ/ಉಪಪ್ರೇರಕರು ಮೇಲ್ವಿಚಾರಕರಾಗಿ ಒಂದು ವೇಳೆ ನೇಮಕಗೊಂಡಲ್ಲಿ ಪ್ರೇರಕ/ಉಪಪ್ರೇರಕರ ಹುದ್ದೆಗೆ ರಾಜೀನಾಮೆ ನೀಡತಕ್ಕದ್ದು ಹಾಗೂ ಬಿಡುಗಡೆ ಪತ್ರವನ್ನು ಸಂಬಂಧಿಸಿದ ಇಲಾಖೆಯಿಂದ ಪಡೆದು ಈ ಕಛೇರಿಗೆ ಸಲ್ಲಿಸತಕ್ಕದ್ದು.
10. ವಯೋಮಿತಿ: ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಅಭ್ಯರ್ಥಿಗಳು 18 ವರ್ಷ ವಯಸ್ಸನ್ನು ಪೂರೈಸಿರತಕ್ಕದ್ದು.

    **ಗರಿಷ್ಟ ವಯೋಮಿತಿ:**

    | | | |
    |---|---|---|
    | ಎ) ಸಾಮಾನ್ಯ ವರ್ಗ | : | 35 ವರ್ಷ |
    | ಬಿ) 2ಎ, 2ಬಿ, 3ಎ, 3ಬಿ | : | 38 ವರ್ಷ |
    | ಸಿ) ಪ.ಜಾ./ಪ.ಪಂ/ಪ್ರ-1 | : | 40 ವರ್ಷ |

11. ಗ್ರಾಮೀಣ ಅಭ್ಯರ್ಥಿಗೆ ಸಂಬಂಧಪಟ್ಟ ಅಭ್ಯರ್ಥಿ ಪ್ರಮಾಣ ಪತ್ರವನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಪಡೆದು ಸಲ್ಲಿಸಬೇಕು.

. . . 3)

12. ಭರ್ತಿ ಮಾಡಿದ ಅರ್ಜಿಯನ್ನು ಆಯಾ ಗ್ರಾಮ ಪಂಚಾಯಿತಿ ಕಾರ್ಯಾಲಯದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಇವರಿಗೆ ದಿನಾಂಕ:14-03-2022 ರಂದು ಸಮಯ 5.00 ಗಂಟೆ ಒಳಗಾಗಿ ಸಲ್ಲಿಸುವುದು.

13. ಅರ್ಜಿ ನಮೂನೆಯನ್ನು ಸಂಬಂಧಿಸಿದ ಗ್ರಾಮ ಪಂಚಾಯಿತಿ ಕಾರ್ಯಾಲಯದಲ್ಲಿ ಪಡೆಯಬಹುದಾಗಿದೆ.

14. ಹೆಚ್ಚಿನ ಮಾಹಿತಿಯನ್ನು ಜಿಲ್ಲಾ ಪಂಚಾಯತ್, ತುಮಕೂರು ಎನ್.ಐ.ಸಿ. ಪೋರ್ಟಲ್ **tumkurzillapanchayat.gov.in** ನಲ್ಲಿ ಪಡೆಯಬಹುದು ಅಥವಾ ಉಪನಿರ್ದೇಶಕರು, ಜಿಲ್ಲಾ ಕೇಂದ್ರ ಗ್ರಂಥಾಲಯ, ತುಮಕೂರು ಈ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದು. (ದೂರವಾಣಿ:0816-2278063). ಅಥವಾ ಆಯಾ ಗ್ರಾಮ ಪಂಚಾಯಿತಿ ಕಾರ್ಯಾಲಯಗಳನ್ನು ಸಂಪರ್ಕಿಸಬಹುದು.

ಉಪನಿರ್ದೇಶಕರು
ಜಿಲ್ಲಾ ಕೇಂದ್ರ ಗ್ರಂಥಾಲಯ, ತುಮಕೂರು
ಹಾಗೂ ಕಾರ್ಯದರ್ಶಿಗಳು, ಗ್ರಾಮ ಪಂಚಾಯಿತಿ ಗ್ರಂಥಾಲಯ
ಮೇಲ್ವಿಚಾರಕರ ನೇಮಕಾತಿ ಸಮಿತಿ, ತುಮಕೂರು.

ಉಪಕಾರ್ಯದರ್ಶಿ-1 ಹಾಗೂ ಸದಸ್ಯರು
ಗ್ರಾಮ ಪಂಚಾಯಿತಿ ಗ್ರಂಥಾಲಯ
ಮೇಲ್ವಿಚಾರಕರ ನೇಮಕಾತಿ ಸಮಿತಿ, ತುಮಕೂರು

ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
ಜಿಲ್ಲಾ ಪಂಚಾಯತ್ ತುಮಕೂರು ಹಾಗೂ ಅಧ್ಯಕ್ಷರ
ಗ್ರಾಮ ಪಂಚಾಯಿತಿ ಗ್ರಂಥಾಲಯ
ಮೇಲ್ವಿಚಾರಕರ ನೇಮಕಾತಿ ಸಮಿತಿ, ತುಮಕೂರು

# ಅರ್ಜಿ ನಮೂನೆ

## ಗೌರವ ಸಂಭಾವನೆ ಆಧಾರದ ಮೇಲೆ ಗ್ರಾಮ ಪಂಚಾಯಿತಿ ಗ್ರಂಥಾಲಯಗಳ ಮೇಲ್ವಿಚಾರಕರ ಹುದ್ದೆಗೆ ಅರ್ಜಿ ಸಲ್ಲಿಸುವ ಬಗ್ಗೆ.

ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ

| | | |
|---|---|---|
| 01. | ಅಭ್ಯರ್ಥಿಯ ಪೂರ್ಣ ಹೆಸರು | |
| 02. | ಅಭ್ಯರ್ಥಿಯ ಖಾಯಂ ವಿಳಾಸ | |
| 03. | ತಂದೆಯ ಹೆಸರು/ಗಂಡನ ಹೆಸರು | |
| 04. | ಹುಟ್ಟಿದ ದಿನಾಂಕ | |
| 05. | ವಯಸ್ಸು | |
| 06. | ವಿದ್ಯಾರ್ಹತೆ | |
| 07. | ಪ್ರವರ್ಗ | |
| 08. | ಈ ಕೆಳಗಿನ ಪ್ರಮಾಣ ಪತ್ರಗಳನ್ನು ಲಗತ್ತಿಸಿದೆಯೇ (ಪ್ರತಿಗಳನ್ನು ಲಗತ್ತಿಸಬೇಕು) | ಹೌದು / ಇಲ್ಲ |
| | ಅ) ಎಸ್.ಎಸ್.ಎಲ್.ಸಿ. ಅಂಕಪಟ್ಟಿ | |
| | ಆ) ಸ್ಥಳೀಯ ವಾಸಿಗರೆಂದು ದೃಢೀಕರಿಸಿ ಪಡಿತರ ಚೀಟಿ/ಮತದಾರರ ಚೀಟಿ/ಆಧಾರ್ ಕಾರ್ಡ್ | |
| | ಇ) ಜಾತಿ ಪ್ರಮಾಣ ಪತ್ರ | |
| | ಈ) ಇತರೆ ಪ್ರಮಾಣ ಪತ್ರ (ಅಂ.ವಿ, ಕ.ಮಾ., ಪ್ರೇರಕ/ಉಪಪ್ರೇರಕ, ಗ್ರಂಥಾಲಯ ವಿಜ್ಞಾನ ತರಬೇತಿ, ಗ್ರಾಮೀಣ ಅಭ್ಯರ್ಥಿ) | |
| 09. | ಅಭ್ಯರ್ಥಿ ಪರಿಚಯದ ಬಗ್ಗೆ ಪರಿಚಿತ ಇಬ್ಬರು ಸ್ಥಳೀಯ ಗಣ್ಯವ್ಯಕ್ತಿಗಳ ಪ್ರಮಾಣ ಪತ್ರ | |

ಈ ಮೇಲಿನ ಎಲ್ಲಾ ದಾಖಲಾತಿಗಳು ಸರಿಯಾಗಿದೆ ಎಂದು ಈ ಮೂಲಕ ನಾನು ಪ್ರಮಾಣ ಪೂರ್ವಕವಾಗಿ ದೃಢೀಕರಿಸುತ್ತೇನೆ. ಒಂದು ಪಕ್ಷದಲ್ಲಿ ತಪ್ಪು ಮಾಹಿತಿ ನೀಡಿದ್ದು ಕಂಡುಬಂದಲ್ಲಿ ನನ್ನ ಅರ್ಜಿಯನ್ನು ತಿರಸ್ಕರಿಸಬಹುದು.

ಸ್ಥಳ:

ದಿನಾಂಕ:

ಅಭ್ಯರ್ಥಿಯ ಸಹಿ